# ಕಿತ್ತಳೆ ಜಡೆಯ ರಾಣಿ




ಹೆಣ್ಣು ಮುಡಿದ ಮೊಗ್ಗಿನ ಜಡೆಯಂತಿದೆ ಇದರ ಹೂ ಗೊಂಚಲು. ಬಣ್ಣ ಮಾತ್ರ ಹೊಳಪಿನ ಕಿತ್ತಳೆ. ಹಾಗಾಗಿ ಇವಳನ್ನು 'ಕಿತ್ತಳೆ ಜಡೆ ರಾಣಿ' ಎಂದು ಕರೆಯಬಹುದೇನೋ!

ಮಡಗಾಸ್ಕರ್ ದೇಶದ ಈ ಸಸ್ಯವನ್ನು ಅಲ್ಲಿನ ಮಾಜಿ ರಾಜ್ಯಪಾಲರಾದ ಕೊಲ್‌ವಿಲ್ಲೆಯವರ ಗೌರವ ಸೂಚಕವಾಗಿ ಕೊಲ್‌ವಿಲ್ಲೆ ಗ್ಲೋರಿ ಎಂದು ಕರೆಯಲಾಗಿದೆ. ಸಸ್ಯಶಾಸ್ತ್ರೀಯ ಹೆಸರು ಕೊಲ್‌ವೆಲ್ಲಿಯಾ ರೆಸಿಮೋಸ. ಗಿಡಗಳ ಎಲೆಗಳು ಗುಲ್ ಮೊಹರ್ ಎಲೆಗಳಂತಯೇ ಕಾಣುತ್ತವೆ. ವಯಸ್ಕ ಗಿಡಗಳು ಸೆಪ್ಟಂಬರ್ ತಿಂಗಳಿನಲ್ಲಿ ಹೂ ಬಿಡಲು ಆರಂಭಿಸುತ್ತವೆ. ಮರದ ತುದಿಯಿಂದ ಕೆಳಗೆ ಬಾಗಿ ಜೋತು ಬಿದ್ದಿರುವ ಹೂ ಗೊಂಚಲಿನಲ್ಲಿ ಹೊಳೆಯುವ ಕಿತ್ತಳೆ ಬಣ್ಣದ ಹೂಗಳಿರುತ್ತವೆ. ಪ್ರತಿಗೊಂಚಲಿನ ತುದಿಯಲ್ಲಿ ಹಸಿರುಮಿಶ್ರಿತ ಹಳದಿ ಮೊಗ್ಗುಗಳಿರುತ್ತವೆ. ಹೂಗಳು ಅರಳಿದಂತೆ ಗಾಢ ಕಿತ್ತಳೆ ಬಣ್ಣಕ್ಕೆ ತಿರುಗಿ ಕಣ್ಮನ ತಣಿಸುತ್ತವೆ. ಹೂವಿನಿಂದ ಹೊರ ಸೂಸುವ ಮಕರಂದಕ್ಕೆ ಜೇನು ಹುಳಗಳು, ದುಂಬಿ ದಾಂಗುಡಿಯಿಡುತ್ತವೆ. ಉದ್ದ, ಚಪ್ಪಟೆಯಾದ, ಗಟ್ಟಿಯಾಗಿರುವ ಬೀಜಗಳನ್ನೊಳಗೊಂಡ ಕಾಯಿಗಳು ರೂಪುಗೊಳ್ಳುತ್ತವೆ. ಈಗ ರಾಜ್ಯದ ಅನೇಕ ನಗರ– ಪಟ್ಟಣಗಳಲ್ಲಿ ಕಾಣಸಿಗುತ್ತವೆ.

—ಎಸ್. ಶಿಶುಪಾಲ, ದಾವಣಗೆರೆ



# ಕಲ್ಲು ಬಾಳೆ

ಯಾವುದೇ ಜಲಪಾತಗಳೆಡೆ ಹೋದಾಗ ಕಲ್ಲುಬಂಡೆಗಳ ಸಂದಿಯಲ್ಲಿ ಸಹಜವಾಗೆ ಬೆಳೆಯುವ ಕಲ್ಲುಬಾಳೆಯ ಕಡೆ ಗಮನ ಕೊಟ್ಟವರು ಕಡಿಮೆ. ಜಲಪಾತದ ಕಪ್ಪು ಕಲ್ಲು ಬಂಡೆಗಳ ಮೇಲೆ ಮಣ್ಣು ಎಂಬುದೇ ಇಲ್ಲದಿರುವಾಗ ಅಲ್ಲಿ ಬಾಳೆ ಗಿಡಗಳು ಹಚ್ಚ ಹಸಿರಿನಿಂದ ಬೆಳೆಯುವುದೆಂದರೆ ಆಶ್ಚರ್ಯವಲ್ಲವೆ?

ಕಲ್ಲುಬಾಳೆ ಎಂಬುದು ಒಂದು ಗಟ್ಟಿ ಜಾತಿಯ ಬಾಳೆ. ಅದು ಬೆಳೆಯಲು ಕಲ್ಲು ಬಂಡೆಯೂ ಸಾಕು. ಅದರ ಎಲೆಗಳನ್ನು ನಾವು ಬಳಸಬಹುದಾದರೂ ಅದರ ಫಲ ತಿನ್ನಲಾಗದು. ಕೇವಲ ಅಲಂಕಾರಕ್ಕೆ ಕಲ್ಲುಬಾಳೆ ನೆಟ್ಟು ಬೆಳೆಸುವವರೂ ಇದ್ದಾರೆ.

—ಜಿ.ಎಂ. ಬೊಮ್ನಳ್ಳಿ

# ವಿಶಿಷ್ಟ ಹರಕೆ

ತೀರ್ಥಹಳ್ಳಿ ತಾಲ್ಲೂಕಿನ ಕನ್ನಂಗಿಯಿಂದ 6 ಕಿ.ಮೀ ದೂರದ ಕಾನನದ ವನರಾಶಿಯ ನಡುವೆ ನೆಲೆಸಿರುವ ಅಲಸೆ ಚಂಡಿಕಾಂಬೆ ದೇವಿ ಅನೇಕ ಭಕ್ತರ ಬಯಕೆಯನ್ನು ಸಾಕ್ಷಾತ್ಕರಿಸುತ್ತಾಳೆ ಎಂಬ ನಂಬಿಕೆ ಇದೆ.

ಈ ದೇವಿಯ ಮಹಿಮೆ ಅಪಾರವೆಂದು ನಂಬುವ ಭಕ್ತರು ತಮ್ಮ ವೈಯಕ್ತಿಕ ಸಮಸ್ಯೆ, ಉದ್ಯಮ, ಭೂವಾಜ್ಯಗಳೆಲ್ಲವನ್ನೂ ದೇವಿ ಪರಿಹರಿಸುತ್ತಾಳೆಂದು ಭಾವಿಸಿದ್ದಾರೆ. ತಮ್ಮ ಮನದಿಚ್ಛೆ ಈಡೇರಿದರೆ ದೇವಿಯ ಸನ್ನಿಧಿಯಲ್ಲಿ ವಿಶೇಷ ಪೂಜೆಯನ್ನು ಕೈಗೊಳ್ಳುತ್ತೇವೆಂಬ ಸಂಕಲ್ಪವನ್ನು ಮಾಡಿ ಹರಕೆ ಹೊರುತ್ತಾರೆ.

ತಮ್ಮ ಇಚ್ಛೆಯನ್ನು ಒಂದು ಚೀಟಿಯಲ್ಲಿ ಬರೆದು ನಿಂಬೆ ಹಣ್ಣಿನೊಂದಿಗೆ ತ್ರಿಶೂಲದಂತಹ ಆಯುಧದಲ್ಲಿ ಚುಚ್ಚಿ ಗರ್ಭಗುಡಿಯ ಹಿಂಭಾಗದಲ್ಲಿರುವ ವೃಕ್ಷದ ಬುಡದಲ್ಲಿ ಪ್ರತಿಷ್ಠಾಪಿಸಿ ಶೀಘ್ರವೇ ಪರಿಹಾರ ದೊರೆಯುವುದೆಂಬ ಆಶಯದೊಂದಿಗೆ ತೆರಳುತ್ತಾರೆ. ಪ್ರತೀ ಮಂಗಳವಾರ ಮತ್ತು ಶುಕ್ರವಾರ ದೇವಿಯಲ್ಲಿ ಪ್ರಸಾದ ಕೇಳುವ ಪದ್ಧತಿಯಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನ ಆಗಮಿಸುತ್ತಾರೆ. ಆದರೆ ಭಕ್ತಪರವಶರಾದ ಭಕ್ತರು ಮರಕ್ಕೆ ಹೊಡೆಯುವ ಮೊಳೆಯ ಹೊಡೆತಕ್ಕೆ ಮರ ಎಷ್ಟು ನಲುಗುತ್ತಿದ್ದೆಯೋ ಕಲ್ಪನೆಗೆ ನಿಲುಕದು.

—ಕೆ. ರಾಮಕೃಷ್ಣ, ಸೀಬಿನಕೆರೆ

